**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ: 31.07.2023</u>**
**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಶ್ರೀ ಎಸ್.ಎಂ.ಐ ವಕೀಲರಿಂದ</u>**

1. ನಾನು ವ್ಯಾಪಾರಸ್ಥ. ನಾನು ರೆಡಿಮೆಡ್ ಗಾರ್ಮೆಂಟ್ಸ್ ಶಾಪ್ ಇಟ್ಟುಕೊಂಡಿರುತ್ತೇನೆ. ನನಗೆ ಆರೋಪಿ ಆರೋಪಿಯ ಮಾವನಿಂದ ಪರಿಚಯವಾಗಿರುತ್ತಾರೆ. ಆರೋಪಿಯಿಂದ ರೂ. 60 ಲಕ್ಷ ಬರಬೇಕಾಗಿದ್ದು ಅದರ ಸಲುವಾಗಿ ನಾನು ಈ ಪ್ರಕರಣ ದಾಖಲಿಸಿರುತ್ತೇನೆ. ಆರೋಪಿ ಬಿಲ್ಡರ್ ಇದ್ದು ಕಾನ್ದಲವಿ ಕಟ್ಟಡ ಸಲುವಾಗಿ ನನ್ನ ಬಳಿ ರೂ. 60 ಲಕ್ಷ ಕೈ ಸಾಲ ಪಡೆದಿದ್ದು ಇರುತ್ತದೆ. ನಾನು ರೂ. 60 ಲಕ್ಷ ಹಣವನ್ನು ಆರ್.ಟಿ.ಜಿ.ಎಸ್ ಮೂಲಕ 2017-18 ರಲ್ಲಿ ಆರೋಪಿಗೆ ವರ್ಗಾಯಿಸಿರುತ್ತೇನೆ. ನಿಖರವಾದ ದಿನಾಂಕ ನನಗೆ ನೆನಪಿಲ್ಲ. ನನ್ನ ಮತ್ತು ಆರೋಪಿಯ ಮಧ್ಯ ರೂ. 60 ಲಕ್ಷ ಹಣಕ್ಕೆ ಸಂಬಂಧಿಸಿದಂತೆ ಕರಾರು ಪತ್ರ ಆಗಿರುವುದಿಲ್ಲ. ಆರೋಪಿ 3 ತಿಂಗಳಲ್ಲಿ ಹಣ ಹಿಂದಿರುಗಿಸುತ್ತೇನೆಂದು ನನಗೆ 2 ಚೆಕ್ಕುಗಳನ್ನು ಕೊಟ್ಟಿದ್ದರು.

2. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. 2017 ರಿಂದ ಇಲ್ಲಿಯವರೆಗೆ ಆದಾಯ ತೆರಿಗೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿದಾರರು ನ್ಯಾಯಾಲಯ ಆದೇಶಿಸಿದರೆ ಹಾಜರುಪಡಿಸುತ್ತೇನೆಂದು ಹೇಳುತ್ತಾರೆ. ಈ ಮೇಲೆ ಹೇಳಿದ ವ್ಯವಹಾರ ಬಿಟ್ಟು ಆರೋಪಿ ಮತ್ತು ನನ್ನ ನಡುವೆ ಯಾವುದೇ ಬೇರೆ ವ್ಯವಹಾರ ಇರುವುದಿಲ್ಲ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಆರೋಪಿಯ ವಿರುದ್ಧ ಪೊಲೀಸ್ ದೂರು ನೀಡಿರುತ್ತೇನೆಂದರೆ ಸರಿ. ಹಣ ಹಿಂದಿರುಗಿಸುವ ಸಲುವಾಗಿ ಆರೋಪಿಯನ್ನು ಸಂಪರ್ಕಿಸಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿದಾರರು ಸಾಕಷ್ಟು ಬಾರಿ ಆರೋಪಿಗೆ ಸಂಪರ್ಕಿಸಿದರೂ ಕೂಡ ನನ್ನ ಸಂಪರ್ಕಕ್ಕೆ ಸಿಕ್ಕಿರುವುದಿಲ್ಲ ಅವರ ತಾಯಿ ಪೋನ್ ಮೂಲಕ ತಮಗೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲ ಎಂದು ಹೇಳಿರುತ್ತಾರೆ. 3 ತಿಂಗಳ ನಂತರ ಆರೋಪಿಗೆ ಹಣ ಹಿಂದಿರುಗಿಸಿ ಎಂದು ನಾನು ಆರೋಪಿಗೆ ನೋಟೀಸ್ ಕೊಟ್ಟಿರುವುದಿಲ್ಲ. ನನಗೆ ನಿಪಿ-5 ರ ಬಗ್ಗೆ ಮಾಹಿತಿ ಇರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಎಂಎಂ ನ್ಯಾಯಾಧಿಶರು,
ಬೆಂಗಳೂರು.

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕಃ 16.09.2023**
**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಎಂ.ಐ ವಕೀಲರಿಂದ**

3. ನಾನು ಆರೋಪಿ ನನ್ನ ಬಳಿ ಸಾಲ ಕೇಳುವಾಗ ತನ್ನ ಪ್ಲಾನ್ ಸ್ಯಾಂಕ್ಷನ್ ಆಗಿದೆ ಎಂದು ಹೇಳಿದ್ದು ಯಾವ ಪ್ಲಾನ್ ಎಂದು ಗೊತ್ತಿಲ್ಲ. ಆರೋಪಿ ಹಣ ಪಾವತಿಸುವ ಸಲುವಾಗಿ ರೂ. 20 ಲಕ್ಷದಂತೆ 3 ಚೆಕ್ಕುಗಳನ್ನು ನನಗೆ ಕೊಟ್ಟಿದ್ದರು. ಆರೋಪಿ ರೂ. 60 ಲಕ್ಷ ಹಣದಲ್ಲಿ ರೂ. 20 ಲಕ್ಷ ಹಣವನ್ನು ಆರ್.ಟಿ.ಜಿ.ಎಸ್ ಮೂಲಕ ಹಿಂದಿರುಗಿಸಿರುತ್ತಾರೆ. ದಿಃ 23.05.2018 ರಂದು ಆರೋಪಿ ನನಗೆ ರೂ. 10 ಲಕ್ಷ ಹಣವನ್ನು ಆರ್.ಟಿ.ಜಿ.ಎಸ್ ಮೂಲಕ ಕೊಟ್ಟಿರುತ್ತಾರೆಂದರೆ ನನಗೆ ನೆನಪಿಲ್ಲ. ನಾನು ಮಾರ್ಚ್ 2018 ರಿಂದ ಜೂನ್ 2018 ನನ್ನ ಬ್ಯಾಂಕ್ ಖಾತಾ ಸ್ಟೇಟ್‌ಮೆಂಟ್ ನ್ನು ಹಾಜರುಪಡಿಸುತ್ತೇನೆ. ನನ್ನ ದೂರಿನಲ್ಲಿ ಮತ್ತು ನೋಟೀಸಿನಲ್ಲಿ ಆರೋಪಿ ರೂ. 10 ಲಕ್ಷ ಹಣವನ್ನು ಆರ್.ಟಿ.ಜಿ.ಎಸ್ ಮೂಲಕ ಕೊಟ್ಟಿದ್ದನ್ನು ಹೇಳಿರುವುದಿಲ್ಲ ಎಂದರೆ ಸರಿ. ಆರೋಪಿ ನನಗೆ ದಿಃ 15.06.2018 ರಂದು ರೂ. 10 ಲಕ್ಷ ನಗದು ಹಣ ಕೊಟ್ಟಿರುತ್ತಾರೆಂದರೆ ಸರಿಯಲ್ಲ.

4. ದಿಃ 08.08.2018 ರಂದು ಆರೋಪಿ ನನಗೆ ಕೊಡಬೇಕಾದ ಬಾಕಿ ಹಣ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ದಿಃ 13.02.2021 ರಂದು ಆರೋಪಿ ನನಗೆ ಡಿಡಿ ಮೂಲಕ ರೂ. 5 ಲಕ್ಷ ಹಣ ಪಾವತಿಸಿರುತ್ತಾರೆಂದರೆ ನನಗೆ ನೆನಪಿಲ್ಲ. ಆರೋಪಿ ಅದೇ ದಿನ ಡಿಡಿ ಮೂಲಕ ಮತ್ತೆ ರೂ. 5 ಲಕ್ಷ ಹಣ ಪಾವತಿಸಿರುತ್ತಾರೆಂದರೆ ನನಗೆ ನೆನಪಿಲ್ಲ. ಅದೇ ದಿನ ಆರೋಪಿ ಡಿಡಿ ಮೂಲಕ ರೂ. 10 ಲಕ್ಷ ಹಣ ಪಾವತಿಸಿರುತ್ತಾರೆಂದರೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಕೊಟ್ಟಿದ್ದರೆ ಅದು ನನ್ನ ಖಾತೆಯಲ್ಲಿ ನಮೂದಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಎಂಎಂ ನ್ಯಾಯಾಧಿಶರು,
ಬೆಂಗಳೂರು.